ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ದಿನಾಂಕ ೧೮ನೇ ಆಗಸ್ಟ್ ೧೯೮೬, ಶ್ರಾವಣ ೨೭, ೧೯೦೭ ಶಕ.

ಸದನವು ವಿಧಾನಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೧೧ ಗಂಟೆಗೆ ಸಮಾವೇಶಗೊಂಡಿತು.

[ಮಾನ್ಯ ಅಧ್ಯಕ್ಷರು (ಶ್ರೀ ಬಿ. ಜಿ. ಬಣಕಾರ್) ಪೀಠವನ್ನಲಂಕರಿಸಿದರು.]

ಸಂತಾಪ ಸೂಚನೆಗಳು

ಅಧ್ಯಕ್ಷರು – ಈಗ ಸಂತಾಪ ಸೂಚಕ ನಿರ್ಣಯಗಳು ಮೊದಲನೆಯದಾಗಿ ಲೋಕಸಭೆಯ ಸದಸ್ಯರಾದ ಶ್ರೀ ಜಗಜೀವನ್‌ರಾಮ್ ಅವರು ದಿನಾಂಕ ೬-೭-೧೯೮೬ರಂದು ನಿಧನರಾದರು. ಶ್ರೀಯುತರು ಸ್ವಾತಂತ್ರ್ಯ ಚಳುವಳಿಯಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ಅವರು ಸಂವಿಧಾನ ಸಭೆಯ ಸದಸ್ಯರು ಹಾಗೂ ೧೯೫೨ನೇ ಸಾಲಿನಿಂದ ಸತತವಾಗಿ ಲೋಕಸಭೆಯ ಸದಸ್ಯರಾಗಿದ್ದರು. ಮಾನ್ಯರು ಕೇಂದ್ರ ಸರ್ಕಾರದ ಹಲವಾರು ಖಾತೆಗಳಲ್ಲಿ ಮಂತ್ರಿಗಳಾಗಿ ಹಾಗೂ ೧೯೭೯ನೇ ಸಾಲಿನಲ್ಲಿ ಉಪ ಪ್ರಧಾನಿಯಾಗಿ ಸೇವೆ ಸಲ್ಲಿಸಿದ್ದಾರೆ. ದೇಶದ ಹಿರಿಯ ನಾಯಕರೊಬ್ಬರಾಗಿದ್ದ ಇವರ ನಿಧನದಿಂದ ರಾಷ್ಟ್ರಕ್ಕೆ ತುಂಬಲಾರದ ನಷ್ಟವುಂಟಾಗಿದೆ. ಅವರ ನಿಧನಕ್ಕೆ ಈ ಸದನವು ಅಪಾರ ಶೋಕ ವ್ಯಕ್ತಪಡಿಸುತ್ತದೆ. ಮಾನ್ಯ ಹಿರಿಯ ನಾಯಕರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಎದ್ದುನಿಂತು ಒಂದು ನಿಮಿಷ ಮೌನವನ್ನು ಆಚರಿಸಿತು)

ಅಧ್ಯಕ್ಷರು— ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನೆಯನ್ನು ಅವರ ಕುಟುಂಬದವರಿಗೆ ಕಳುಹಿಸಲಾಗುವುದು. ಆಮೇಲೆ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಎ. ಚನ್ನ ಬಸಪ್ಪನವರು ದಿನಾಂಕ ೨೬-೩-೧೯೮೬ರಂದು ನಿಧನರಾದರು. ಶ್ರೀಯುತರು ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು.

ಲೋಕಸಭೆಯ ಸದಸ್ಯರಾಗಿದ್ದ ಶ್ರೀ ಬಿ. ವಿ. ದೇಸಾಯಿ ಇವರು ದಿನಾಂಕ ೪-೫-೧೯೮೬ರಂದು ನಿಧನರಾದರು. ಇವರು ರಾಯಚೂರು ಲೋಕಸಭಾ ಕ್ಷೇತ್ರದಿಂದ ಸಂಸತ್ ಸದಸ್ಯರಾಗಿ ಆಯ್ಕೆಯಾಗಿದ್ದರು. ಶ್ರೀಯುತರು ೧೯೮೦ರಿಂದ ೧೯೮೪ರ ತನಕ ಸಂಸತ್ ಸದಸ್ಯರಾಗಿದ್ದರು. ೧೯೭೭ರಲ್ಲಿ ಕರ್ನಾಟಕ ವಿಧಾನ ಸಭೆಯ ಸದಸ್ಯರಾಗಿದ್ದರು. ಹೀಗೆ ರಾಜ್ಯ ಹಾಗೂ ರಾಷ್ಟ್ರಕ್ಕೆ ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದ ಶ್ರೀ ಭೂಪಾಳಂ ಚಂದ್ರಶೇಖರಯ್ಯ ಇವರು ದಿನಾಂಕ ೧೧-೫-೧೯೮೬ರಂದು ನಿಧನರಾದರು. ಶ್ರೀಯುತರು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದ್ದರು. ಪತ್ರಿಕಾ ರಂಗದಲ್ಲಿ ಉತ್ತಮ ಪತ್ರಿಕೋದ್ಯಮಿಯಾಗಿ ಸಮಾಜ ಸೇವಾ ಧುರೀಣರೆನಿಸಿಕೊಂಡಿದ್ದರು.

ಮಾಜಿ ಶಾಸಕರಾದ ಶ್ರೀ ಡಿ. ವೆಂಕಟರಾಮಯ್ಯ ಇವರು ದಿನಾಂಕ ೧೩-೫-೧೯೮೬ರಂದು ನಿಧನರಾದರು. ಶ್ರೀಯುತರು ೧೯೬೨ರಿಂದ ೧೯೬೭ರವರೆಗೆ ಮತ್ತು ೧೯೭೨ರಿಂದ ೧೯೭೭ರವರೆಗೆ ವಿಧಾನ

ಸಭೆಯು ಹಾಗೂ ೧೯೫೨ರಿಂದ ೧೯೫೬ರ ತನಕ ವಿಧಾನ ಪರಿಷತ್ತಿನ ಸದಸ್ಯರಾಗಿದ್ದರು. ಅಲ್ಲದೆ ಪ್ರಸಿದ್ಧ ವಕೀಲರೂ ಹಾಗೂ ಹಿರಿಯ ಸ್ವಾತಂತ್ರ್ಯ ಹೋರಾಟಗಾರರಾಗಿದ್ದು, ಹಿಂದುಳಿದ ವರ್ಗಗಳ ಏಳಿಗೆಗಾಗಿ ಶ್ರಮಿಸಿದ್ದರು.

ಶ್ರೀ ಶಂಕರ್‌ದೇವ್ ಇವರು ದಿನಾಂಕ ೧೨-೮ ೧೯೮೬ರಂದು ನಿಧನರಾದರು. ಶ್ರೀಯುತರು ೧೯೫೬ರಿಂದ ೧೯೫೭ರ ತನಕ ಕರ್ನಾಟಕ ವಿಧಾನಸಭೆಯ ಸದಸ್ಯರಾಗಿದ್ದರು. ಹೈದರಾಬಾದ್ ರಾಜ್ಯ ಸರ್ಕಾರದಲ್ಲಿ ಮಂತ್ರಿಗಳಾಗಿ ಸೇವೆ ಸಲ್ಲಿಸಿದ್ದರು. ಇವರು ಎರಡು ಬಾರಿ ಲೋಕಸಭೆಯ ಸದಸ್ಯರಾಗಿ ಆಯ್ಕೆಯಾಗಿದ್ದರು.

ಮಾಜಿ ಸೇನಾ ಮಹಾ ದಂಡನಾಯಕ ಶ್ರೀ ಅರುಣ್‌ಕುಮಾರ್ ಶ್ರೀಧರ್ ವೈದ್ಯ ಅವರು ದಿನಾಂಕ ೧೦-೮-೧೯೮೬ರಂದು ಪುಣೆಯಲ್ಲಿ ಹಂತಕರ ಗುಂಡೇಟಿಗೆ ಬಲಿಯಾದರು. ಅವರು ೧೯೫೫ನೇ ಜನವರಿ ೨೦ರಂದು ಸೇನೆಗೆ ಸೇರಿ ೧೯೮೬ನೇ ಜನವರಿ ೩೧ರಂದು ಭಾರತದ ಭೂ ಸೇನೆಯ ಪ್ರಧಾನಿಯ ಮಹಾ ಸೇನಾ ದಂಡನಾಯಕರಾಗಿ ನಿವೃತ್ತರಾದರು. ಶ್ರೀಯುತರು ಸಮರ್ಥ ದಕ್ಷ ಅಧಿಕಾರಿಗಳಲ್ಲೊಬ್ಬರಾಗಿದ್ದರು. ೧೯೭೫ರ ಭಾರತ ಪಾಕ್ ಸಮರದ ಸಮಯದಲ್ಲಿ ಅವರು ತೋರಿದ ಶೌರ್ಯಕ್ಕಾಗಿ ಅವರಿಗೆ ಮಹಾವೀರ ಚಕ್ರ ಪ್ರಶಸ್ತಿ ನೀಡಿ ಗೌರವಿಸಲಾಗಿತ್ತು. ಹಾಗೂ ೧೯೭೧ರ ಸಮರದ ಸಮಯದಲ್ಲೂ ಅವರಿಗೆ ಎರಡನೆಯ ಬಾರಿ ಮಹಾವೀರ ಚಕ್ರ ಪ್ರಶಸ್ತಿ ಲಭಿಸಿತ್ತು. ನಿಧನ ಹೊಂದಿದ ಗಣ್ಯ ವ್ಯಕ್ತಿಗಳ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

(ಸಭೆಯು ಎದ್ದು ನಿಂತು ಒಂದು ನಿಮಿಷ ಮೌನ ಆಚರಿಸಿತು)

ಅಧ್ಯಕ್ಷರು— ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನೆಯನ್ನು ಅಗಲಿದ ಸದಸ್ಯರುಗಳ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು. ಇನ್ನು ಮುಂದೆ ಪ್ರಶ್ನೋತ್ತರಗಳು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು
ಏತ ನೀರಾವರಿ ನಿಗಮದ ಕುರಿತು

೧೧. ಶ್ರೀ ಬಾಬುರೆಡ್ಡಿ ವೆಂ. ತುಂಗಳ್(ಬೀಳಗಿ) ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಮಂತ್ರಿಗಳು ದಯವಿಟ್ಟು ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ವಿಜಾಪುರ ಜಿಲ್ಲೆಗಾಗಿಯೇ ಪ್ರತ್ಯೇಕವಾದ ಏತ ನೀರಾವರಿ ನಿಗಮವೊಂದನ್ನು ಸರಕಾರದವರು ಅಧಿಕೃತವಾಗಿ ಘೋಷಿಸಿದ್ದಾರೆಯೇ?

ಆ) ಹಾಗಿದ್ದಲ್ಲಿ, ಈ ನಿಗಮದ ಕಾರ್ಯವ್ಯಾಪ್ತಿಯೇನು?

ಇ) ಈ ನಿಗಮಕ್ಕೆ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡುವ ವಿಚಾರ ಸರಕಾರದವರ ಪರಿಶೀಲನೆಯಲ್ಲಿದೆಯೇ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)—

ಅ) ಇಲ್ಲ ಆದರೆ ಕೃಷ್ಣಾ ಜಲಾನಯನ ಪ್ರದೇಶದ ಏತ ನೀರಾವರಿ ನಿಗಮದ ಕೇಂದ್ರ ಕಛೇರಿಯನ್ನು ವಿಜಾಪುರದಲ್ಲಿ ತೆರೆಯಲಾಗಿದೆ.

ಆ) ಕೃಷ್ಣಾ ಜಲಾನಯನ ಪ್ರದೇಶದ ಏತ ನೀರಾವರಿ ನಿಗಮದ ವ್ಯಾಪ್ತಿಗೆ ಶಿವಮೊಗ್ಗ, ಚಿತ್ರದುರ್ಗ, ಉತ್ತರ ಕನ್ನಡ, ಬೆಳಗಾವಿ, ವಿಜಾಪುರ, ಧಾರವಾಡ ಗುಲ್ಬರ್ಗಾ, ಬೀದರ್, ಬಳ್ಳಾರಿ ಮತ್ತು ರಾಯಚೂರು ಜಿಲ್ಲೆಗಳು ಒಳಪಡುತ್ತವೆ.

ಇ) ಪರಿಶೀಲನೆಯಲ್ಲಿದೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್—ಮಾನ್ಯ ಅಧ್ಯಕ್ಷರೇ ಏತ ನೀರಾವರಿಗಾಗಿ ಕೃಷ್ಣಾ ಮತ್ತು ಕಾವೇರಿ ಬೇಸಿನ್‌ಗೆ ಪ್ರತ್ಯೇಕವಾದಂಥ ಒಂದು ಕಾರ್ಪೊರೇಷನ್ ಅನ್ನು ಸ್ಥಾಪನೆ ಮಾಡಿರುವುದಕ್ಕಾಗಿ ನಿಜವಾ